1-30 P. M.

ಶ್ರೀ ಬಿ. ಬೈರಪ್ಪಾಜಿ.—ಇತ್ತೀಚೆಗೆ ಸರ್ಕಾರವು ಪ್ರತಿಯೊಂದು ಇಲಾಖೆಯಲ್ಲೂ ಸಂಸ್ಥಾನದ ಮಟ್ಟದಲ್ಲಿ ಸಮಿತಿಗಳ ಮೂಲಕ ಕೆಲಸಗಳನ್ನು ಕೊಡುವ ಏರ್ಪಾಡು ಮಾಡಿದೆ. ಜಿಲ್ಲಾ ಮಟ್ಟದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಿಂದ ಹೆಚ್ಚಿಗೆ ಕೆಲಸವಾಗುತ್ತಿಲ್ಲ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿರುವುದು ಗೊತ್ತಿದೆಯೇ ? ಉದ್ಯೋಗ ವಿನಿಮಯ ಕೇಂದ್ರಗಳನ್ನು ಮುಚ್ಚುವಂತೆ ವ್ಯವಸ್ಥೆ ಮಾಡಲಾಗಿದೆಯೇ ?

ಶ್ರೀ ಎಸ್. ಎಂ. ಯಾಹ್ಯಾ.—ಇದರಿಂದ ಯಾರಿಗೂ ನಷ್ಟ ಖಂಡಿತವಾಗುವುದಿಲ್ಲ. ಪಬ್ಲಿಕ್ ಸರ್ವೀಸ್ ಕಮೀಷನ್ ಆಗಲೀ, ರಿಕ್ರೂಟ್‌ಮೆಂಟ್ಸ್ ಕಮಿಟಿಗಳಾಗಲೀ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳನ್ನು ಕೇಳಿ ರಿಕ್ರೂಟ್‌ಮೆಂಟ್ ಮಾಡತಕ್ಕಂಥ ಅಧಿಕಾರವಿಲ್ಲ. ಒಂದು ವೇಳೆ ಅವರು ಕೇಳಿದರೆ, ನಾವು ಕೊಡುತ್ತೇವೆ. ಪಬ್ಲಿಕ್ ಸೆಕ್ಟಾರ್ ಇಂಡಿಸ್ಪೆನ್ಸಿಬಲ್ ಆಗಲೀ, ಯಾವುದೇ ಒಂದು ಇಂಡಿಸ್ಪೆನ್ಸಿಬಲ್ ಆಗಲೀ, ಅವರು ಉದ್ಯೋಗ ಕೊಡಬೇಕಾದರೆ, ನಮ್ಮ ಉದ್ಯೋಗ ವಿನಿಮಯ ಕೇಂದ್ರಗಳಿಗೆ ಬರೆದು ತರಿಸಿಕೊಳ್ಳುತ್ತಾರೆ.

ಎಂ. ಬಿ. ರಾಮಸ್ವಾಮಿ.—ಬಹುಭಾಗದ ಜನ ತಮಿಳುನಾಡು ಮತ್ತು ಕೇರಳದವರು ನಮ್ಮ ಕರ್ನಾಟಕ ರಾಜ್ಯದಲ್ಲಿ ರಿಜಿಸ್ಟರ್ ಮಾಡಿಸುತ್ತಿದ್ದಾರೆ, ಇದರಿಂದ ನಮ್ಮ ರಾಜ್ಯದ ಮಕ್ಕಳಿಗೆ ತೊಂದರೆಯಾಗಿರುವುದು ಸರ್ಕಾರಕ್ಕೆ ಗೊತ್ತಿದೆಯೇ ? ಇನ್ನು ಮುಂದಾದರೂ ಕರ್ನಾಟಕದವರಿಗೆ ಹೆಚ್ಚಿಗೆ ಅವಕಾಶ ಕಲ್ಪಿಸಿ ಕೊಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಈಗ ಬೇರೆ ರಾಜ್ಯದಿಂದ ಬಂದು ಇಲ್ಲಿ ರಿಜಿಸ್ಟರ್ ಮಾಡಿಸುವುದಕ್ಕೆ ತುಂಬಾ ಕಷ್ಟವಿದೆ. ರಿಜಿಸ್ಟರ್ ಮಾಡಿಸಬೇಕಾದರೆ, ಕೆಲವು ನಿಯಮಗಳನ್ನು ಹಾಕಿರುತ್ತೇವೆ. ತಹಶೀಲ್ದಾರ್‌ರವರಿಂದ 6 ತಿಂಗಳು ಈ ರಾಜ್ಯದಲ್ಲಿ ವಾಸವಿರುವ ಪ್ರಮಾಣ ಪತ್ರ ಇರಬೇಕು ; ಈಗ ಇಂತವರಿಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿಕೊಡಲಾಗುತ್ತೆ.

ಕಬ್ಬನಹಳ್ಳಿ ಕ್ರಾಸಿನಿಂದ ಯಳನಾಡಗೆ ಅದಿರು ಸಾಗಿಸುವ ರಸ್ತೆ

268. ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನ ಹಳ್ಳಿ).—ಲೋಕೋಪಯೋಗಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಚಿಕ್ಕನಾಯಕನ ಹಳ್ಳಿಯಲ್ಲಿ ಕಬ್ಬನ ಹಳ್ಳಿ ಕ್ರಾಸಿನಿಂದ ಯಳನಾಡುವರೆಗೆ ಓರ್ಕ್ಯಾರಿಯಿಂಗ್ ರೋಡು ಬಹಳ ಅವ್ಯವಸ್ಥೆಯಲ್ಲಿದ್ದು ಅದನ್ನು ತೀವ್ರ ರಿಪೇರಿ ಮಾಡಿಸಿ ಆಸ್ಫಾರ್ಟ್ ಹಾಕಿ ಕೊಡಲು ಸರಕಾರ ಉದ್ದೇಶಿಸಿದೆಯೇ :

(ಆ) ಹಾಗಾದರೆ, ಯಾವಾಗ ?

ಶ್ರೀ ಎಸ್. ಟಿ. ನಾಗರಾಳ್.—(ಸಣ್ಣ ನೀರಾವರಿ ಶಾಖೆಯ ರಾಜ್ಯ ಮಂತ್ರಿಗಳು)

ಶ್ರೀ ಎಚ್. ಎಂ. ಚನ್ನಬಸಪ್ಪ ರವರ ಪರವಾಗಿ ಲೋಕೋಪಯೋಗಿ ಮಂತ್ರಿಗಳು

(ಅ) ಇಲ್ಲ. ಅಲ್ಲಲ್ಲಿ ಕೆಲವು ಗುಂಡಿಗಳು ಮಾತ್ರ ಇವೆ.

(ಆ) ಪ್ರಸಕ್ತ ಸಾಲಿನಲ್ಲಿ ಗುಂಡಿಗಳನ್ನು ಮುಚ್ಚಲು ಕ್ರಮ ಕೈಕೊಳ್ಳಲಾಗಿದೆ.

ಶ್ರೀ ಎನ್. ಬಸವಯ್ಯ.—ಕಬ್ಬನ ಹಳ್ಳಿ ಮತ್ತು ಯಳನಾಡು ರಸ್ತೆಯಲ್ಲಿರತಕ್ಕಂಥ ಗುಂಡಿಗಳು ಎಷ್ಟು ವರ್ಷದಿಂದ ಇವೆ ?

† ಶ್ರೀ ಎಸ್. ಬಿ. ನಾಗರಾಳ್.—ಎಷ್ಟು ವರ್ಷದಿಂದ ಇವೆ ಎನ್ನುವುದು ಗೊತ್ತಿಲ್ಲ ? ರಸ್ತೆ ಕೆಟ್ಟಿದೆ ಎನ್ನುವುದು ಗೊತ್ತು.

ಶ್ರೀ ಎನ್. ಬಸವಯ್ಯ.—ಸ್ವಾಮಿ, ಎಷ್ಟು ಗುಂಡಿಗಳು ಇವೆ ಎಂದು ಸಂಖ್ಯೆಗಳನ್ನಾದರೂ ಹೇಳುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್.—ಗುಂಡಿಗಳ ಸಂಖ್ಯೆ ಗೊತ್ತಿಲ್ಲ.

ಶ್ರೀ ಎನ್. ಬಸವಯ್ಯ.—ಪ್ರತಿನಿತ್ಯ ನೂರಾರು ಲಾರಿಗಳು ತಿರುಗಾಡುತ್ತಾ ಇದ್ದು, ಸುಮಾರು 15 ವರ್ಷಗಳಿಂದ ಹಾಗೆಯೇ ಇದೆ. ರಸ್ತೆಗೆ ಪ್ಯಾಚ್ ಹಾಕಿದರೂ ಮಳೆ ಬಂದಾಗ ಪ್ಯಾಚೆಲ್ಲಾ ಹೋಗುತ್ತದೆ. ಇದರ ಬಗ್ಗೆ ಹಲವು ಬಾರಿ ರಿಕ್ವೆಸ್ಟ್ ಕೊಟ್ಟಿರುತ್ತೇವೆ. ಆದಷ್ಟು ಜಾಗ್ರತೆ ಆ ಸ್ಫಾಲ್ಟ್ ಮಾಡಿಸಿ ಕೊಡುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್.—ಈಗಾಗಲೆ ಇದಕ್ಕೆ ಸಂಬಂಧಪಟ್ಟ ಹಾಗೆ 14,600 ರೂಪಾಯಿಗಳ ಮತ್ತು 14,700 ರೂಪಾಯಿಗಳ ಎರಡು ಅಂದಾಜು ಆಗಿದೆ. ಸುಮಾರು 37 ಮೈಲಿ ರಸ್ತೆಯನ್ನು ಮಾರ್ಚ್ ಕೊನೆಯೊಳಗೆ ಸರಿಯಾದಂತಹ ರಹದಾರಿ ಮಾಡಿ ಅನುಕೂಲ ಮಾಡಿ ಕೊಡುತ್ತೇವೆ.

Proposal to divert Madayi river in Khanapur Taluk

320. SRI B. M. HORAKERI (Guledgud).—Will the Minister for Major and Medium Irrigation be pleased to state:—

(a) whether there is a proposal before Government for diverting and storing the water of Madayi river in Khanapur taluk having a dam constructed near Kengala to feed Malaprabha River and increase the water source capacity :

(b) if so, whether Plans and estimates have been prepared ;

(c) if so, the additional areas to be included under command area ?

SRI S. B. NAGARAL.—(Minister of State for Major Irrigation On behalf of SRI SUBHASH ASTHURE (Minister of State for Major and Medium Irrigation).—

(a) Yes.

(b) The Project is still under preliminary stage of investigation.

(c) In view of reply furnished at item (b) above, reply to this question does not arise.

ಶ್ರೀ ಬಿ. ಎಂ. ಹೊರಕೇರಿ.—ಮಲಪ್ರಭದ ಮೇಲುದಂಡೆ, ನವಿಲು ತೀರ್ಥದ ಡ್ಯಾಮ್ ಸ್ಕೀಮ್‌ನ ಅನೇಕ ಯೋಜನೆಗಳು ಕಾರ್ಯಗತವಾಗಿವೆಯೇ ? ಈ ಯೋಜನೆಗಳಿಂದ ಸುಮಾರು 5ಲಕ್ಷ ಎಕರೆಗೆ ನೀರನ್ನು ಒದಗಿಸುವುದಕ್ಕೆ ಆಗುತ್ತದೆಯೇ ? ತಮಕೆ ಮತ್ತು ಚಲಚಿ ಗುಡ್ಡ ಹಾಗು ಕೆಂಗೇಲ ಹತ್ತಿರ ಅಣೆಕಟ್ಟನ್ನು ನಿರ್ಮಿಸುವ ವಿಚಾರವೇನು ? ಹುಬ್ಬಳ್ಳಿ ಮತ್ತು ಧಾರವಾಡ ನಗರಗಳಿಗೆ ಕುಡಿಯುವ ನೀರು ಸಹ ಇಲ್ಲಿಂದಲೇ ಹೋಗಬೇಕಾಗುತ್ತದೆ.

† ಶ್ರೀ ಎಸ್. ಬಿ. ನಾಗರಾಳ್.—ಮದಾಯಿ ನದಿ ನೀರಿನ ವಾರ್ಪಣವನ್ನು ಡೈವರ್ಟ್ ಮಾಡುವ ವಿಚಾರ ಸರ್ಕಾರದಲ್ಲಿದೆ. ಪೂರ್ವ ಭಾವಿ ಇನ್‌ವೆಸ್ಟಿಗೇಷನ್ ನಡೆಯುತ್ತಿದ್ದು, ಮದಾಯಿ ಮತ್ತು ಮಲಪ್ರಭಾದಿಂದ ವಿಶೇಷವಾದ ಸೌಲಭ್ಯಗಳು ಸಿಗುತ್ತವೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಇನ್‌ವೆಸ್ಟಿಗೇಷನ್ ಗೋಸ್ಕರ ಸರ್ಕಾರ ಆದೇಶ ಕೊಟ್ಟಿದೆ.